( ಇಂದು ದಿನಾಂಕಃ 15.03.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಜಿ .ಪಿ.ಟಿ. ರವರಿಂದಃ**

17. 3 ನೇ ಪ್ರತಿವಾದಿ ನನ್ನ ಬ್ಯಾಂಕ್ ಖಾತೆಗೆ ಒಟ್ಟು ರೂ. 3 ಲಕ್ಷ ಹಣ ಹಾಕಿರುವುದನ್ನು ನಾನು ಪರಿಶೀಲಿಸಿರುತ್ತೇನೆ. ದಿನಾಂಕಃ 29-05-2024 ರಂದು ಸದರಿ ರೂ. 3,30,000/- ಹಣ ಪಾವತಿಸಿದ ಬಗ್ಗೆ ವಕೀಲರ ನೋಟಿಸಿನಲ್ಲಿ ಉಲ್ಲೇಖಿಸಿದ್ದು ಸದರಿ ವಕೀಲರ ನೋಟಿಸು ನನಗೆ ತಲುಪಿರುತ್ತದೆ ಎಂದರೆ ಸಾಕ್ಷಿ ಹೌದು ಆದರೆ ದಿನಾಂಕ ನನಗೆ ಸರಿಯಾಗಿ ನೆನಪಿಲ್ಲ ಅಂತಾ ಉತ್ತರಿಸುತ್ತಾರೆ. ಸದರಿ ಹಣವನ್ನು ನಾನು ಈವರೆಗೆ ನಾನು ಪ್ರತಿವಾದಿಗೆ ವಾಪಸ್ಸು ಕೊಟ್ಟಿದ್ದೇನೆ ಎಂದರೆ ನಿಜ. ದಿಃ12-06-2023 ರ ಕರಾರು ರದ್ದತಿ ಆಗದಿರುವ ಕಾರಣ ನಾನು ಸದರಿ ಹಣ ವಾಪಸ್ಸು ಕೊಟ್ಟಿಲ್ಲ ಎಂದರೆ ಸರಿಯಲ್ಲ.

18. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿರತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಕಾರವಾರ.